ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 02-03-1992

(महाशिवरात्रि मनाना अर्थात् प्रतिज्ञा करना, व्रत लेना और बलि चढ़ना)

## *ಮಹಾಶಿವರಾತ್ರಿ ಆಚರಿಸುವುದು ಅರ್ಥಾತ್ ಪ್ರತಿಜ್ಞೆ ಮಾಡುವುದು. ವ್ರತ ತೆಗೆದುಕೊಳ್ಳುವುದು ಮತ್ತು ಬಲಿಯಾಗುವುದು*

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಜ್ಯೋತಿರ್ಬಿಂದು ಶಿವ ತಂದೆ ಜ್ಯೋತಿರ್ಬಿಂದು ಸಾಲಿಗ್ರಾಮಗಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ದಿವ್ಯಮಹಾಜ್ಯೋತಿ ತಂದೆಯು ತಮ್ಮ ಜ್ಯೋತಿರ್ಬಿಂದು ಮಕ್ಕಳೊಂದಿಗೆ ಮಿಲನ ಮಾಡುತ್ತಿದ್ದಾರೆ. ಬಾಪ್‌ದಾದಾರವರೂ ಸಹ ಮಹಾನ್ ಜ್ಯೋತಿಯಾಗಿದ್ದಾರೆ ಮತ್ತು ತಾವು ಮಕ್ಕಳೂ ಸಹ ಮಹಾನ್ ಜ್ಯೋತಿ ಸ್ವರೂಪರಾಗಿದ್ದೀರಿ. ಅಂದಾಗ ದಿವ್ಯಜ್ಯೋತಿ ತಂದೆಯು ದಿವ್ಯಜ್ಯೋತಿ ಆತ್ಮರೊಂದಿಗೆ ಮಿಲನ ಮಾಡುತ್ತಿದ್ದಾರೆ. ಈ ಮಹಾನ್ ಜ್ಯೋತಿಯು ಎಷ್ಟು ಮಹಾನ್ ಹಾಗೂ ಪ್ರಿಯ ಮತ್ತು ಅತೀತವಾಗಿದೆ! ಬಾಪ್‌ದಾದಾ ಪ್ರತಿಯೊಬ್ಬರ ಮಸ್ತಕದ ಮಧ್ಯದಲ್ಲಿ ಹೊಳೆಯುತ್ತಿರುವ ಜ್ಯೋತಿಯನ್ನು ನೋಡುತ್ತಿದ್ದಾರೆ. ಎಷ್ಟು ದಿವ್ಯ ಮತ್ತು ಪ್ರಿಯವಾದ ದೃಶ್ಯವಾಗಿದೆ, ಹೊಳೆಯುತ್ತಿರುವ ಆತ್ಮಿಕ ನಕ್ಷತ್ರಗಳ ಎಷ್ಟು ಸುಂದರ ಸಂಘಟನೆಯನ್ನು ತಯಾರು ಮಾಡುತ್ತಿದ್ದೇವೆ. ಈ ಆತ್ಮಿಕ ಜ್ಯೋತಿರ್ಮಯ ನಕ್ಷತ್ರಮಂಡಲವು ಅಲೌಕಿಕ ಮತ್ತು ಅತಿಸುಂದರವಾಗಿದೆ. ತಾವೆಲ್ಲರೂ ಈ ದಿವ್ಯ ತಾರಾಮಂಡಲದಲ್ಲಿ ತಮ್ಮ ಹೊಳೆಯುತ್ತಿರುವ ಬಿಂದುಸ್ವರೂಪವನ್ನು ನೋಡಿಕೊಳ್ಳುತ್ತಿದ್ದೀರಾ? ಇದೇ ಮಹಾಶಿವರಾತ್ರಿಯಾಗಿದೆ. ಶಿವಜ್ಯೋತಿಯ ಜೊತೆ ತಾವು ಅನೇಕ ಜ್ಯೋತಿರ್ಬಿಂದು ಸಾಲಿಗ್ರಾಮಗಳಾಗಿದ್ದೀರಿ. ತಂದೆಯೂ ಶ್ರೇಷ್ಠ ಹಾಗೂ ಮಕ್ಕಳೂ ಶ್ರೇಷ್ಠರಾಗಿದ್ದೀರಿ ಆದ್ದರಿಂದ ಮಹಾಶಿವರಾತ್ರಿಯೆಂದು ಗಾಯನ ನಡೆಯುತ್ತಿದೆ. ಎಷ್ಟು ಶ್ರೇಷ್ಠ ಭಾಗ್ಯಶಾಲಿ

ಆತ್ಮರಾಗಿದ್ದೀರಿ, ಚೈತನ್ಯ ಸಾಕಾರ ಸ್ವರೂಪದಲ್ಲಿ ಶಿವತಂದೆಯ ಜೊತೆ ಶಿವರಾತ್ರಿಯನ್ನು ಆಚರಿಸುತ್ತಿದ್ದೀರಿ. ಇಂತಹ ಅಲೌಕಿಕ ಶಿವರಾತ್ರಿಯನ್ನು ಆಚರಿಸುವಂತಹ ನಾವು ಸಾಲಿಗ್ರಾಮ ಆತ್ಮರಾಗಿದ್ದೇವೆ ಎಂಬುದು ಎಂದೂ ಸಂಕಲ್ಪ-ಸ್ವಪ್ನದಲ್ಲಿಯೂ ಯೋಚಿಸಿರಲಿಲ್ಲ. ತಾವೆಲ್ಲರೂ ಚೈತನ್ಯ ರೂಪದಲ್ಲಿ ಆಚರಿಸುತ್ತೀರಿ. ಅದರ ನೆನಪಾರ್ಥವೇ ಈಗ ಭಕ್ತರ ಮೂಲಕ ಜಡಚಿತ್ರದಲ್ಲಿ ಚೈತನ್ಯ ಭಾವನೆಯಿಂದ ಆಚರಿಸುವುದನ್ನು ನೋಡುತ್ತಿದ್ದೀರಿ. ಸತ್ಯಭಕ್ತರು ಚಿತ್ರದಲ್ಲಿ ಭಾವನೆಯಿಂದ ಭಾವನಾ ಸ್ವರೂಪದ ಅನುಭವ ಮಾಡುತ್ತಾರೆ ಮತ್ತು ತಾವು ಸಾಲಿಗ್ರಾಮ ಆತ್ಮರು ಸನ್ಮುಖದಲ್ಲಿ ಆಚರಿಸುವವರಾಗಿದ್ದೀರಿ ಅಂದಾಗ ಎಷ್ಟೊಂದು ಭಾಗ್ಯವಾಗಿದೆ! ಪದಮಾ ಪದಮ್, ನೂರು ಕೋಟಿ, ಹತ್ತು ಸಾವಿರ ಕೋಟಿ ಇದೂ ಸಹ ತಮ್ಮ ಭಾಗ್ಯದ ಮುಂದೆ ಏನೇನೂ ಇಲ್ಲ ಆದ್ದರಿಂದ ಎಲ್ಲಾ ಮಕ್ಕಳು ನಿಶ್ಚಯದ ನಶೆಯಿಂದ ನಾವು ನೋಡಿದೆವು. ನಾವು ಪಡೆದೆವು ಎಂದು ಹೇಳುತ್ತೀರಿ. ಈ ಗೀತೆಯು ನಿಮ್ಮೆಲ್ಲರದಾಗಿದೆಯೋ ಅಥವಾ ಕೆಲವರದಾಗಿದೆಯೋ? ಎಲ್ಲರೂ ಹಾಡುತ್ತೀರಲ್ಲವೆ? ಅಥವಾ ನೋಡೋಣ, ಪಡೆಯೋಣ ಎಂದು ಹಾಡುತ್ತೀರಾ? ಪಡೆದುಕೊಂಡಿದ್ದೀರೋ ಅಥವಾ ಪಡೆಯಬೇಕಾಗಿದೆಯೋ? ಡಬಲ್ ವಿದೇಶಿಯರು ಏನು ತಿಳಿದುಕೊಳ್ಳುತ್ತೀರಿ? ಪಡೆದುಬಿಟ್ಟಿದ್ದೀರಾ? ತಂದೆಯನ್ನು ನೋಡಿದ್ದೀರಲ್ಲವೆ. ಹೃದಯದಿಂದ ಹೇಳುತ್ತೀರಿ- ತಂದೆಯನ್ನು ನೋಡಿದ್ದೇವೆ, ಪಡೆದಿದ್ದೇವೆ. ನೋಡುವುದು ಮತ್ತು ಪಡೆಯುವುದಷ್ಟೇ ಅಲ್ಲ. ತಂದೆಯನ್ನೇ ತಮ್ಮವರನ್ನಾಗಿ ಮಾಡಿಕೊಂಡಿದ್ದೀರಿ. ತಂದೆಯು ತಮ್ಮವರಾಗಿದ್ದಾರಲ್ಲವೆ. ನೋಡಿ, ತಂದೆಯು ತಮ್ಮವರಾಗಿಬಿಟ್ಟರು ಆದ್ದರಿಂದಲೇ ತಮ್ಮ ಕರೆಗೆ ಓಗೊಟ್ಟು ತಂದೆಯು ಬಂದುಬಿಡುತ್ತಾರಲ್ಲವೆ ಅಂದಮೇಲೆ ಅಧಿಕಾರಿಗಳಾಗಿಬಿಟ್ಟಿರಿ.

ಮಹಾಶಿವರಾತ್ರಿಯ ವಿಶೇಷತೆಗಳೇನು? ಮೊದಲನೆಯದಾಗಿ ತಂದೆಯ ಮುಂದೆ ಪ್ರತಿಜ್ಞೆ ಮಾಡುತ್ತೀರಿ ಮತ್ತು ಎರಡನೆಯದಾಗಿ ಪ್ರೀತಿಯಿಂದ ವ್ರತವನ್ನಿಡುತ್ತೀರಿ ಏಕೆಂದರೆ ಪ್ರೀತಿ ಮತ್ತು ಖುಷಿಯಲ್ಲಿ ಎಲ್ಲವನ್ನೂ ಮರೆತುಬಿಡುತ್ತೀರಿ ಆದ್ದರಿಂದ ವ್ರತವನ್ನಿಡುತ್ತೀರಿ. ಖುಷಿಯ ಔಷಧಿಯನ್ನು ಸೇವಿಸುತ್ತೀರಿ ಆದ್ದರಿಂದ ಬೇರೆ ಔಷಧಿಯ ಅವಶ್ಯಕತೆಯಿರುವುದಿಲ್ಲ. ಮಿಲನದ ಖುಷಿಯ ಕಾರಣ ವ್ರತವನ್ನಿಟ್ಟುಕೊಳ್ಳುತ್ತೀರಿ. ವ್ರತ ಖುಷಿಯ ಚಿಹ್ನೆಯೂ ಆಗಿದೆ ಮತ್ತು ವ್ರತವನ್ನಿಡುವುದು ಎಂದರೆ ಪ್ರೀತಿಯಲ್ಲಿ ತ್ಯಾಗದ ಭಾವನೆಯಾಗಿ ಏನನ್ನಾದರೂ ಬಿಡುವುದು ಎಂದರೆ ತ್ಯಾಗ ಭಾವನೆಯ ಚಿಹ್ನೆಯಾಗಿದೆ. ಮೂರನೆಯ ಮಾತು ಶಿವರಾತ್ರಿ ಅರ್ಥಾತ್ ಬಲಿಯಾಗುವುದು. ನೆನಪಾರ್ಥದಲ್ಲಿ ಸ್ಥೂಲಬಲಿಯನ್ನು ಕೊಡುತ್ತಾರೆ ಆದರೆ ಬಲಿಯಾಗುವುದು ಮನಸ್ಸು-ಬುದ್ಧಿಯಿಂದ ಮತ್ತು ಸಂಬಂಧದಿಂದ ಸಮರ್ಪಿತರಾಗುವುದೇ ವಾಸ್ತವಿಕ ಬಲಿಯಾಗುವುದು ಅಂದಾಗ ಇವು ಮೂರೂ ವಿಶೇಷತೆಗಳು ಮಹಾಶಿವರಾತ್ರಿಯ ವಿಶೇಷತೆಗಳಾಗಿವೆ. ಶಿವರಾತ್ರಿಯನ್ನು ಆಚರಿಸುವುದು ಎಂದರೆ ಈ ಮೂರೂ ವಿಶೇಷತೆಗಳನ್ನು ಪ್ರತ್ಯಕ್ಷ ಜೀವನದಲ್ಲಿ ತರುವುದು ಕೇವಲ ಹೇಳುವುದಲ್ಲ ಆದರೆ ಮಾಡುವುದಾಗಿದೆ. ಹೇಳುವುದು ಮತ್ತು ಮಾಡುವುದು ಸದಾ ಸಮಾನವಾಗಿರಲಿ. ಬಾಪ್‌ದಾದಾ ಮಕ್ಕಳ ಖುಷಿಯ ಸಮಾಚಾರವನ್ನೂ ಕೇಳಿದೆವು- ಭಾರತದ ಮಕ್ಕಳಿರಲಿ. ಡಬಲ್ ವಿದೇಶಿ ಮಕ್ಕಳಿರಲಿ ಎಲ್ಲರೂ ಮಹಾಶಿವರಾತ್ರಿಯ ಪ್ರತ್ಯಕ್ಷಸ್ವರೂಪದ ಪ್ರತಿಜ್ಞೆ ಮಾಡಿದ್ದೀರಿ. ಪ್ರತಿಜ್ಞೆ ಅರ್ಥಾತ್ ಹೇಳುವುದು ಮತ್ತು ಮಾಡುವುದು, ಎರಡೂ ಸಮಾನ. ಬಹಳ ಒಳ್ಳೆಯ ಮಾತಾಗಿದೆ- ಎಲ್ಲರೂ ಮೊದಲು ಬಾಪ್‌ದಾದಾರವರಿಗೆ ಎಲ್ಲದಕ್ಕಿಂತ ದೊಡ್ಡದಾದ ಪ್ರತಿಜ್ಞೆಯ ಉಡುಗೊರೆಯನ್ನು ನೀಡಿದ್ದೀರಿ. ಇದಕ್ಕಾಗಿ ಬಾಪ್‌ದಾದಾ ಎಲ್ಲಾ ಮಕ್ಕಳ ಉಡುಗೊರೆಗೆ ಅಭಿನಂದನೆಗಳನ್ನು ತಿಳಿಸುತ್ತಿದ್ದಾರೆ ಉಡುಗೊರೆಯಲ್ಲಿ ಕೊಟ್ಟಿರುವ ಪ್ರತಿಜ್ಞೆಯೂ ಸದಾ ಸ್ಮೃತಿಯಿಂದ ಸಮರ್ಥರನ್ನಾಗಿ ಮಾಡುತ್ತಾ ಇರುವುದು, ಮೊದಲೇ ಇದನ್ನು ಆಲೋಚಿಸಬೇಡಿ - ಪ್ರತಿಜ್ಞೆಯನ್ನಂತೂ ಮಾಡುತ್ತೇವೆ ನಡೆಯಲು ಆಗುತ್ತದೆಯೋ ಇಲ್ಲವೋ ನಿಭಾಯಿಸಲು ಆಗುತ್ತದೆಯೋ ಇಲ್ಲವೋ ಈ ರೀತಿ ಯೋಚಿಸುವುದು ಎಂದರೆ ಬಲಹೀನತೆಯ ಆಹ್ವಾನ ಮಾಡುವುದು ಬಲಹೀನತೆ ಅರ್ಥಾತ್ ಮಾಯೆ, ತಾವೇ ಆಹ್ವಾನ ಮಾಡಿದಾಗ ಆ ಬಲಹೀನತೆಯು ಮೊದಲೇ ಬರುವುದಕ್ಕಾಗಿ ತಯಾರಾಗಿರುತ್ತದೆ. ತಾವೇ ಆಹ್ವಾನ ಮಾಡುತಿರುವುದು ಎಂದರೆ ಅದಕ್ಕೆ ನೀವು ಇನ್ನೂ ನಿಮಂತ್ರಣ ಕೊಡುತ್ತಿದ್ದೀರಿ ಎಂದರ್ಥ. ಕರ್ಮ ಆದ್ದರಿಂದ ಯಾವುದೇ ಸಂಕಲ್ಪ ಹಾಗೂ ಕರ್ಮ ಮಾಡುತ್ತಿರುವಾಗ ಸಮರ್ಥ ಸ್ಥಿತಿಯಲ್ಲಿ ಸ್ಥಿತರಾಗಿ, ಸಾಮರ್ಥ್ಯದಿಂದ ಮಾಡಿರಿ. ನಿರ್ಬಲ ಸಂಕಲ್ಪವನ್ನು ಸೇರಿಸಬೇಡಿ. ಈ ಶ್ರೇಷ್ಠ ಸಂಕಲ್ಪವನ್ನು ಇಟ್ಟುಕೊಳ್ಳಿ- ಧೈರ್ಯ ನಮ್ಮದು, ಗಮನ ನಮ್ಮದು ಮತ್ತು ಸಹಯೋಗ ತಂದೆಯದು. ಈ ವಿಧಿಯಿಂದ ಪ್ರತಿಜ್ಞೆಯನ್ನು ಪ್ರತ್ಯಕ್ಷತೆಯಲ್ಲಿ ತರುವುದರಲ್ಲಿ ಬಹಳ

ಸಹಜ ಅನುಭವ ಮಾಡುತ್ತೀರಿ ಸದಾ ಇದನ್ನೇ ಆಲೋಚಿಸಿ- ಅನೇಕ ಕಲ್ಪದ ವಿಜಯೀ ಆತ್ಮನಾಗಿದ್ದೇನೆ ವಿಜಯದ ಖುಷಿ, ವಿಜಯದ ನಶೆಯು ಶಕ್ತಿಶಾಲಿಯನ್ನಾಗಿ ಮಾಡಿಬಿಡುವುದು. ವಿಜಯವು ತಾವು ಬ್ರಾಹ್ಮಣ ಆತ್ಮರಿಗಾಗಿ ಸದಾ ಜೊತೆಗಾರನಾಗಿ ಬಂದಿಸಲ್ಪಟ್ಟಿದೆ ಅದು ಮತ್ತೆಲ್ಲಿಗೆ ಹೋಗುವುದು? ವಿಜಯವು ಪಾಂಡವರಿಗಲ್ಲದೆ ಮತ್ಯಾರಿಗೆ ಜೊತೆ ನೀಡಿದೆ ಅದೇ ಪಾಂಡವರಾಗಿದ್ದೀರಲ್ಲವೇ! ತಂದೆಯು ಜೊತೆಗಾರನಾದಾಗ ವಿಜಯವೂ ತಮ್ಮ ಜೊತೆಗಾರನಾಗಿದೆ . ಸದಾ ತಮ್ಮ ಮಸ್ತಕದಲ್ಲಿ ವಿಜಯದ ತಿಲಕವು ಇಡಲ್ಪಟ್ಟಿದೆ. ಇದನ್ನು ನೋಡಿಕೊಳ್ಳಿರಿ. ಯಾರು ಪ್ರಭುವಿನ ಕೊರಳಿನ ಮಾಲೆಯಾಗಿಬಿಟ್ಟರೋ ಅವರೆಂದೂ ಸೋಲನ್ನನುಭವಿಸಲು ಸಾಧ್ಯವಿಲ್ಲ. ಸಂಪೂರ್ಣ ವಿಜಯಿಯ ರೂಪದಲ್ಲಿ ತಮ್ಮ ಸ್ಮೃತಿಚಿಹ್ನೆಯ ವಿಜಯಮಾಲೆಯನ್ನು ನೋಡುತ್ತಿದ್ದೀರಲ್ಲವೆ. ಸೋಲು ಮತ್ತು ಗೆಲುವಿನ ಮಾಲೆಯೆಂದು ಗಾಯನವಿಲ್ಲ ಅಲ್ಲವೆ, ವಿಜಯಮಾಲೆಯಾಗಿದೆ. ವಿಜಯೀ ಮಣಿಗಳು ತಾವಾಗಿದ್ದೀರಲ್ಲವೇ ಅಂದಮೇಲೆ ವಿಜಯಮಾಲೆಯ ಮಣಿಗಳು ಎಂದೂ ಸೋಲನ್ನು ಅನುಭವಿಸುವುದಿಲ್ಲ. ಪ್ರತಿಯೊಬ್ಬರೂ ಯಾವ ಸಂಕಲ್ಪ ಮಾಡಿದಿರಿ, ಬಾಪ್‌ದಾದಾರವರು ಎಲ್ಲಾ ದೃಶ್ಯವನ್ನು ನೋಡಿದೆವು. ಒಳ್ಳೆಯ ಉಮ್ಮಂಗ-ಉತ್ಸಾಹದಿಂದ ಖುಷಿ- ಖುಷಿಯಿಂದ ಪ್ರತಿಜ್ಞೆ ಮಾಡಿದ್ದೀರಿ ಮತ್ತು ತಾವು ಚೈತನ್ಯ ಸಾಲಿಗ್ರಾಮಗಳು ಪ್ರತಿಜ್ಞೆ ಮಾಡಿದ್ದೀರಿ ಆದ್ದರಿಂದಲೇ ಭಕ್ತರೂ ಸಹ ಅದರ ನೆನಪಾರ್ಥವನ್ನು ಆಚರಿಸುತ್ತಾ ಇರುತ್ತಾರೆ. ಒಳ್ಳೆಯದು-

ಬಲಿಯಾಗಿಬಿಟ್ಟಿದ್ದೀರಾ? ಬಲಿಯಾಗುವುದು ಅರ್ಥಾತ್ ಮಹಾಬಲಶಾಲಿಯಾಗುವುದು. ಯಾವುದರ ಬಲಿ ಕೊಡುತ್ತೀರಿ? ಬಲಹೀನತೆಗಳ ಬಲಿ. ಯಾವಾಗ ಬಲಹೀನತೆಗಳ ಬಲಿ ಕೊಟ್ಟಿದ್ದೀರೋ ಆಗ ಏನಾಗಿಬಿಟ್ಟಿದ್ದೀರಿ? ಮಹಾಬಲಶಾಲಿ. **ಎಲ್ಲದಕ್ಕಿಂತ ದೊಡ್ಡ ಬಲಹೀನತೆಯು ದೇಹಾಭಿಮಾನವಾಗಿದೆ. ದೇಹಭಾನವನ್ನು ಸಮರ್ಪಣೆ ಮಾಡುವುದು ಅರ್ಥಾತ್ ಅದರ ವಂಶವನ್ನೂ ಸಹ ಸಮರ್ಪಣೆ ಮಾಡಿದಿರಿ ಏಕೆಂದರೆ ದೇಹಾಭಿಮಾನದ ಸೂಕ್ಷ್ಮ ಅಂಶವು ಬಹಳ ದೊಡ್ಡದಾಗಿದೆ. ಅನೇಕ ಪ್ರಕಾರದ ಚಿಕ್ಕ-ದೊಡ್ಡ ದೇಹಭಾನವಿದೆ ಅಂದಾಗ ದೇಹಭಾನದ ಬಲಿಕೊಡುವುದು ಎಂದರೆ ವಂಶ ಸಹಿತ ಸಮರ್ಪಿತರಾಗುವುದು. ಅಂಶವನ್ನೂ ಇಟ್ಟುಕೊಳ್ಳಬಾರದು. ಅಂಶ ಮಾತ್ರ ಉಳಿದುಕೊಂಡರೂ ಸಹ ಅದು ಪದೇ-ಪದೇ ಆಯಸ್ಕಾಂತದಂತೆ ಆಕರ್ಷಿಸುತ್ತಾ ಇರುವುದು. ತಮಗೆ ಅದು ಅರ್ಥವಾಗುವುದೇ ಇಲ್ಲ. ಬಯಸದಿದ್ದರೂ ಆಯಸ್ಕಾಂತವು ತನ್ನಕಡೆ ಆಕರ್ಷಿಸಿಬಿಡುವುದು. ಯಾವ ಸಮಯದಲ್ಲಾದರೂ ಯಾವುದೇ ಪ್ರಕಾರದ ಕೆಲಸಕ್ಕೆ ಬೇಕಾಗುವುದು ಎಂದು ದೇಹಾಭಿಮಾನವನ್ನು ಒಂದು ಮೂಲೆಯಲ್ಲಿ ಇಟ್ಟುಕೊಳ್ಳಬೇಡಿರಿ. ಹಾಗೆ ಇಟ್ಟುಕೊಂಡು ಏನು ಮಾಡುವುದು, ಅದು ಇಲ್ಲದಿದ್ದರೆ ಕೆಲಸ ನಡೆಯುವುದಿಲ್ಲ ಎಂದು ಹೇಳುತ್ತೀರಿ, ಇದರಿಂದ ಕೆಲಸವು ನಡೆಯುತ್ತದೆ ಆದರೆ ಸ್ವಲ್ಪಸಮಯದ ವಿಜಯವು ಕಂಡುಬರುತ್ತದೆ. ಆ ಅಭಿಮಾನವನ್ನೇ ಸ್ವಮಾನವೆಂದು ತಿಳಿಯುತ್ತೀರಿ ಆದರೆ ಈ ಅಲ್ಪಕಾಲದ ವಿಜಯದಲ್ಲಿ ಬಹಳಕಾಲದ ಸೋಲು ಸಮಾವೇಶವಾಗಿದೆ ಮತ್ತು ಯಾವುದನ್ನು ಸ್ವಲ್ಪಸಮಯದ ಸೋಲೆಂದು ತಿಳಿಯುತ್ತೀರೋ ಅದು ಸದಾಕಾಲದ ವಿಜಯವನ್ನು ಪ್ರಾಪ್ತಿ - ಮಾಡಿಸುತ್ತದೆ ಆದ್ದರಿಂದ ದೇಹಾಭಿಮಾನದ ಅಂಶಮಾತ್ರವೂ ಸಮರ್ಪಣೆಯಾಗಲಿ. ಇದನ್ನೇ ಶಿವತಂದೆಯ - ಮೇಲೆ ಬಲಿಯಾಗುವುದು ಅರ್ಥಾತ್ ಮಹಾಬಲಶಾಲಿಗಳಾಗುವುದು ಎಂದು ಹೇಳಲಾಗುತ್ತದೆ.** ಈ ರೀತಿ ಶಿವರಾತ್ರಿಯನ್ನು ಆಚರಿಸಿದ್ದೀರಲ್ಲವೆ. ಈ ವ್ರತವನ್ನು ಧಾರಣೆ ಮಾಡಿಕೊಳ್ಳಬೇಕಾಗಿದೆ. ಆ ಮನುಷ್ಯರು ಸ್ಥೂಲ ಪದಾರ್ಥಗಳ ವ್ರತವನ್ನಿಟ್ಟುಕೊಳ್ಳುತ್ತಾರೆ ಆದರೆ ತಾವು ಯಾವ ವ್ರತವನ್ನು ತೆಗೆದುಕೊಳ್ಳುತ್ತೀರಿ? ಶ್ರೇಷ್ಠವೃತ್ತಿಯ? ಮೂಲಕ ಈ ವ್ರತ ತೆಗೆದುಕೊಳ್ಳುತ್ತೀರಿ- ಸದಾ ಬಲಹೀನ ವೃತ್ತಿಯನ್ನು ಕಳೆದು ಶುಭ ಮತ್ತು ಶ್ರೇಷ್ಠವೃತ್ತಿಯನ್ನು ಧಾರಣೆ ಮಾಡಿಕೊಳ್ಳುತ್ತೇವೆ. ಯಾವಾಗ ವೃತ್ತಿಯಲ್ಲಿ ಶ್ರೇಷ್ಠತೆಯಿರುವುದೋ ಆಗ ಸೃಷ್ಟಿಯು ಶ್ರೇಷ್ಠವಾಗಿಯೇ ಕಾಣುವುದು ಏಕೆಂದರೆ ವೃತ್ತಿಯಿಂದ ದೃಷ್ಟಿ ಮತ್ತು ಕೃತಿಗೆ ಸಂಬಂಧವಿದೆ. ಯಾವುದೇ ಒಳ್ಳೆಯ ಅಥವಾ ಕೆಟ್ಟಮಾತು ಮೊದಲು ವೃತ್ತಿಯಲ್ಲಿ ಧಾರಣೆಯಾಗುತ್ತದೆ ನಂತರ ಅದೇ ವಾಣಿ ಮತ್ತು ಕರ್ಮದಲ್ಲಿ ಬರುತ್ತದೆ. ವೃತ್ತಿ ಶ್ರೇಷ್ಠವಾಗುವುದು ಎಂದರೆ ವಾಣಿ ಮತ್ತು ಕರ್ಮವು ಸ್ವತಃ ಶ್ರೇಷ್ಠವಾಗುವುದು. ತಮ್ಮ ವಿಶೇಷ ಸೇವೆ ವಿಶ್ವಪರಿವರ್ತನೆಯೂ ಸಹ ಶುಭ ವೃತ್ತಿಯಿಂದಲೇ ಆಗುತ್ತದೆ. ವೃತ್ತಿಯಿಂದ ವೈಬ್ರೇಷನ್ ವಾಯುಮಂಡಲವನ್ನು ತಯಾರು ಮಾಡುತ್ತೀರಿ. ಅಂದಾಗ ಶ್ರೇಷ್ಠವೃತ್ತಿಯ ಈ ವ್ರತವನ್ನು ಧಾರಣೆ ಮಾಡಿಕೊಳ್ಳುವುದೇ ಶಿವರಾತ್ರಿಯನ್ನು ಆಚರಿಸುವುದಾಗಿದೆ. ಇದನ್ನು

ಕೇಳಿಸಿಕೊಂಡಿರಲ್ಲವೆ. ಆಚರಿಸುವುದು ಎಂದರೆ ಆಗುವುದು. ಹೇಳುವುದು ಅರ್ಥಾತ್ ಮಾಡುವುದು. ಯಾರು ಸಿದ್ಧಿಪ್ರಾಪ್ತಿ ಮಾಡಿಕೊಂಡಿರುವ ಆತ್ಮರಿರುತ್ತಾರೆಯೋ ಅವರಿಗೆ ಸಾಮಾನ್ಯಭಾಷೆಯಲ್ಲಿ ಸಿದ್ಧಪುರುಷರೆಂದು ಹೇಳಲಾಗುತ್ತದೆ ಮತ್ತು ತಾವು ಸಿದ್ಧಿಸ್ವರೂಪ ಆತ್ಮರೆಂದು ಹೇಳುತ್ತೀರಿ ಅಂದಾಗ ಅವರ ಪ್ರತೀ ಸಂಕಲ್ಪ ತನ್ನ ಪ್ರತಿ ಹಾಗೂ ಅನ್ಯರಪ್ರತಿ ಯಾವುದನ್ನೇ ಮಾಡಲಿ ಅದು ಕರ್ಮದಲ್ಲಿ ಸಿದ್ಧವಾಗಿಬಿಡುತ್ತದೆ. ಯಾವ ಮಾತನ್ನೇ ಮಾತನಾಡಿದರೂ ಅದು ಸಿದ್ಧವಾಗಿಬಿಡುತ್ತದೆ. ಅದನ್ನೇ ಸತ್‌ವಚನ ಎಂದು ಹೇಳಲಾಗುತ್ತದೆ. ಅಂದಾಗ ಎಲ್ಲರಿಗಿಂತ ಅತಿದೊಡ್ಡ ಸಿದ್ಧಿಸ್ಥರೂಪ ಆತ್ಮರು ತಾವಾಗಿದ್ದೀರಲ್ಲವೆ. ಅಂದಮೇಲೆ ಸಂಕಲ್ಪ ಮತ್ತು ಮಾತು ಸಿದ್ಧವಾಗುತ್ತದೆಯಲ್ಲವೆ. ಸಿದ್ಧವಾಗುವುದು ಅರ್ಥಾತ್ ಸಫಲವಾಗುವುದು. ಪ್ರತ್ಯಕ್ಷಸ್ವರೂಪದಲ್ಲಿ ಬರುವುದು. ಇದು ಸಿದ್ಧವಾಗುವುದಾಗಿದೆ ಆದ್ದರಿಂದ ಇದನ್ನು ಸದಾ ಸ್ಮೃತಿಯಲ್ಲಿಟ್ಟುಕೊಳ್ಳಿರಿ- ನಾವೆಲ್ಲರೂ ಸಿದ್ಧಿಸ್ವರೂಪ ಆತ್ಮರಾಗಿದ್ದೇವೆ. ಸಿದ್ಧಿಸ್ವರೂಪ ಆತ್ಮರಾದ ನಮ್ಮ ಪ್ರತೀ ಸಂಕಲ್ಪ, ಮಾತು, ಪ್ರತೀ ಕರ್ಮವು ಸ್ವಯಂಗೆ ಹಾಗೂ ಸರ್ವರಿಗೆ ಸಿದ್ಧಿ ಪ್ರಾಪ್ತಿ ಆಗುವುದಿರಲಿ. ವ್ಯರ್ಥವಲ್ಲ. ಹೇಳಿದರು ಮತ್ತು ಮಾಡಿದರು. ಅದು ಸಿದ್ಧವಾಯಿತು. ಹೇಳಿದರು, ಆಲೋಚಿಸಿದರು ಆದರೆ ಮಾಡಲಿಲ್ಲವೆಂದರೂ ಅದು ವ್ಯರ್ಥವಾಗಿಹೋಯಿತು. ಕೆಲವರು ಈ ರೀತಿ ಹೇಳುತ್ತಾರೆ- ನಮ್ಮ ಸಂಕಲ್ಪಗಳು ಬಹಳ ಚೆನ್ನಾಗಿ ನಡೆಯುತ್ತವೆ, ತನ್ನಪ್ರತಿ ಅಥವಾ ಸೇವೆಯ ಪ್ರತಿ ಬಹಳ ಒಳ್ಳೆಯ ಉಮ್ಮಂಗದ ವಿಚಾರಗಳು ಬರುತ್ತವೆ. ಆದರೆ ಸಂಕಲ್ಪದವರೆಗೆ ಮಾತ್ರವೇ ಉಳಿದುಕೊಳ್ಳುತ್ತವೆ. ಪ್ರತ್ಯಕ್ಷ ಕರ್ಮದಲ್ಲಿ ಸ್ವರೂಪದಲ್ಲಿ ಬರುವುದಿಲ್ಲ ಎಂದು ಹೇಳುತ್ತಾರೆ ಅಂದಮೇಲೆ ಇದಕ್ಕೆ ಏನು ಹೇಳುವುದು? ಸಂಕಲ್ಪವು ಬಹಳ ಚೆನ್ನಾಗಿದೆ ಆದರೆ ಕರ್ಮದಲ್ಲಿ ಅಂತರವೇಕೆ? ಇದಕ್ಕೆ ಕಾರಣವೇನು? ಒಂದುವೇಳೆ ಬೀಜವು ಬಹಳ ಚೆನ್ನಾಗಿದೆ ಆದರೆ ಅದರಿಂದ ಒಳ್ಳೆಯ ಫಲವು ಬರಲಿಲ್ಲವೆಂದರೆ ಏನು ಹೇಳುವರು? ಧರಣಿ ಅಥವಾ ಹಾರೈಕೆಯ ಕೊರತೆಯಿದೆ. ಹಾಗೆಯೇ ಸಂಕಲ್ಪರೂಪಿ ಬೀಜವು ಚೆನ್ನಾಗಿದೆ. ಬಾಪ್‌ದಾದಾರವರ ಬಳಿ ಸಂಕಲ್ಪಗಳು ತಲುಪುತ್ತವೆ ಆಗ ಬಾಪ್‌ದಾದಾರವರೂ ಸಹ ಮಕ್ಕಳು ಬಹಳ ಒಳ್ಳೆಯ ಬೀಜವನ್ನು ಬಿತ್ತಿದ್ದಾರೆ. ಬಹಳ ಒಳ್ಳೆಯ ಸಂಕಲ್ಪ ಮಾಡಿದ್ದಾರೆ. ಈಗ ಫಲವು ಸಿಕ್ಕಿತೆಂದರೆ ಸಿಕ್ಕಿತು ಎಂದು ಖುಷಿಪಡುತ್ತೇವೆ ಆದರೆ ಆಗುವುದೇನು? ಧೃಡ ಧಾರಣೆಯ ಧರಣಿಯ ಕೊರತೆ ಮತ್ತು ಪದೇ-ಪದೇ ಗಮನವೆಂಬ ಹಾರೈಕೆಯ ಕೊರತೆಯಾಗುತ್ತದೆ. ಬಾಪ್‌ದಾದಾ ಈ ಹಾಸ್ಯದ ಆಟವನ್ನು ನೋಡುತ್ತಾ ಇರುತ್ತೇವೆ. ಹೇಗೆ ಚಿಕ್ಕಮಕ್ಕಳು ಬಲೂನನ್ನು ಹಾರಿಸುತ್ತಾರಲ್ಲವೆ. ಅದರಲ್ಲಿ ಬಹಳ ಚೆನ್ನಾಗಿ ಗಾಳಿ ತುಂಬಿಸಿ ಹಾರಿಸುತ್ತಾರೆ ಮತ್ತು ಖುಷಿಪಡುತ್ತಾರೆ. ಬಲೂನು ಮೇಲೆ ಹೋಯಿತು, ಬಹಳ ಚೆನ್ನಾಗಿ ಹಾರುತ್ತಿದೆ ಎಂದು, ಆದರೆ ನಡೆಯುತ್ತಾ-ನಡೆಯುತ್ತಾ ಕೆಳಗೆ ಬಂದುಬಿಡುತ್ತದೆ. ಹೀಗೆ ಎಂದೂ ಪುರುಷಾರ್ಥದಲ್ಲಿ ನಿರಾಶರಾಗಬೇಡಿ, ಮಾಡಲೇಬೇಕಾಗಿದೆ ಆಗಲೇಬೇಕಾಗಿದೆ. ವಿಜಯಮಾಲೆಯಲ್ಲಿ ನನ್ನದೇ ಸ್ಮೃತಿಚಿಹ್ನೆಯಿದೆ. ನಿರಾಶರಾಗಿ ಒಳ್ಳೆಯದು, ಮಾಡೋಣ. ನೋಡೋಣ ಎಂದು ಆಲೋಚಿಸಬೇಡಿ, ನಾಳೆ ಮಾಡುವುದಲ್ಲ. ಈಗಲೇ ಮಾಡಬೇಕಾಗಿದೆ. ಒಂದುವೇಳೆ ನಿರಾಶೆಗೆ ಒಂದುಸೆಕೆಂಡ್ ಅಥವಾ ನಿಮಿಷಗಳವರೆಗೆ ತಮ್ಮಲ್ಲಿ ಸ್ಥಾನಕೊಟ್ಟರೂ ಸಹ ಮತ್ತೆ ಅದು ಸಹಜವಾಗಿ ಹೋಗುವಂತಹದ್ದಲ್ಲ. ಅದಕ್ಕೂ ಬ್ರಾಹ್ಮಣ ಆತ್ಮರ ಬಳಿ ಮಜಾ ಬರುತ್ತದೆ ಆದ್ದರಿಂದ ಎಂದೂ ನಿರಾಶರಾಗಬೇಡಿ. ಅಭಿಮಾನವೂ ಇಲ್ಲ. ನಿರಾಶೆಯೂ ಇಲ್ಲ. ಕೆಲವರು ಅಭಿಮಾನದಲ್ಲಿ ಬಂದುಬಿಡುತ್ತಾರೆ. ಕೆಲವರು ನಿರಾಶೆಯಲ್ಲಿ ಬಂದುಬಿಡುತ್ತಾರೆ. ಇವರೆಡೂ ಮಹಾಬಲಶಾಲಿಗಳಾಗಲು ಬಿಡುವುದಿಲ್ಲ. ಎಲ್ಲಿ ಅಭಿಮಾನವಿರುವುದೋ ಅಲ್ಲಿ ಅಪಮಾನದ ಅನುಭವವು ಹೆಚ್ಚಿನದಾಗಿ ಆಗುತ್ತದೆ. ಕೆಲವೊಮ್ಮೆ ಅಭಿಮಾನದಲ್ಲಿ, ಕೆಲವೊಮ್ಮೆ ಅಪಮಾನದಲ್ಲಿ ಎರಡರೊಂದಿಗೆ ಆಟವಾಡುತ್ತಾ ಇರುತ್ತಾರೆ. ಎಲ್ಲಿ ಅಭಿಮಾನವಿರುವುದಿಲ್ಲವೋ ಅವರಿಗೆ ಅಪಮಾನವೂ ಸಹ ಅಪಮಾನವೆನಿಸುವುದಿಲ್ಲ. ಅವರು ಸದಾ ನಿರ್ಮಾನ ಹಾಗೂ ನಿರ್ಮಾಣದ ಕಾರ್ಯದಲ್ಲಿ ತತ್ಪರರಾಗಿರುವರು, ಯಾರು ನಿರ್ಮಾನರಾಗಿರುವರೋ ಅವರೇ ನಿರ್ಮಾಣ ಮಾಡಬಲ್ಲರು ಅಂದಮೇಲೆ ಶಿವರಾತ್ರಿಯನ್ನು ಆಚರಿಸುವುದು ಅರ್ಥಾತ್ ನಿರ್ಮಾನರಾಗಿ ನಿರ್ಮಾಣ ಮಾಡುವ ಕಾರ್ಯದಲ್ಲಿ ತೊಡಗುವುದು. ತಿಳಿಯಿತೇ-

ಆದ್ದರಿಂದ ಇಂದು ಎಲ್ಲರೂ ತಮ್ಮ ಹೃದಯದಲ್ಲಿ ಶ್ರೇಷ್ಠ ಸಂಕಲ್ಪದ ಹಗ್ಗದ ಮೂಲಕ ವಿಜಯದ ಬಾವುಟದನ್ನು ಹಾರಿಸಿರಿ. ಈ ಬಾವುಟವನ್ನು ಹಾರಿಸುವುದು ಬ್ರಾಹ್ಮಣರ ಸೇವೆಯ ಪದ್ಧತಿಯಾಗಿದೆ, ವಿಧಿಯಾಗಿದೆ ಆದರೆ ಜೊತೆಜೊತೆಗೆ ಸದಾ ವಿಜಯದ

ಬಾವುಟವು ಹಾರಾಡುತ್ತಾ ಇರಲಿ, ಯಾವುದೇ ದುಃಖದ ಮಾತಿದ್ದರೆ ಬಾವುಟವನ್ನು ಕೆಳಗಿಳಿಸಿಬಿಡುತ್ತಾರೆ ಆದರೆ ತಮ್ಮ ಬಾವುಟವು ಎಂದೂ ಕೆಳಗೆ ಬರಲು ಸಾಧ್ಯವಿಲ್ಲ. ಸದಾ ಮೇಲಿರುತ್ತದೆ. ಇಂತಹ ಬಾವುಟವನ್ನು ಹಾರಿಸುತ್ತೀರಲ್ಲವೆ.

ಒಳ್ಳೆಯದು- ತಪಸ್ಯಾ ವರ್ಷದ ಫಲಿತಾಂಶವು ಸಿಕ್ಕಿತು. ಎಲ್ಲರೂ ತಮ್ಮ-ತಮ್ಮ ವಕೀಲರಾಗಿ ತಮಗೆ ನಂಬರ್ ಕೊಟ್ಟುಕೊಂಡಿರಿ. ಮೆಜಾರಿಟಿ ನಾಲ್ಕಾರು ಕಡೆಯ ಫಲಿತಾಂಶದಿಂದ ಇದೇ ಕಂಡುಬಂದಿತು. ಈ ತಪಸ್ಯಾ ವರ್ಷವು ಎಲ್ಲರಿಗೆ ಸ್ವಯಂನ ಪುರುಷಾರ್ಥದ ಪ್ರತಿ ಬಹಳ ಒಳ್ಳೆಯ ಗಮನ ತರಿಸಿದೆ. ಗಮನ (ಅಟೆನ್ಶನ್) ವು ಹೋಯಿತೆಂದರೆ ಟೆನ್ಶನ್ ಸಹ ಹೊರಟು ಹೋಗುವುದಲ್ಲವೆ. ಅಂದಮೇಲೆ ಕೆಲವರದು ಇಡೀ ಫಲಿತಾಂಶವು ಚೆನ್ನಾಗಿದ್ದಿತು. ಮೆಜಾರಿಟಿ ಮಕ್ಕಳದು ಎರಡನೇ ದರ್ಜೆಯಾಗಿದೆ. ಮೂರನೇ ದರ್ಜೆಯವರೂ ಇದ್ದಾರೆ ಆದರೆ ಮೊದಲು ಮತ್ತು ನಾಲ್ಕನೇ ದರ್ಜೆಯವರು ಕಡಿಮೆಯಿದ್ದಾರೆ. ಎರಡನೇ ದರ್ಜೆಯವರ ಲೆಕ್ಕಕ್ಕಿಂತ ಮೊದಲು ಮತ್ತು ನಾಲ್ಕನೇ ದರ್ಜೆಯವರು ಕಡಿಮೆಯಿದ್ದಾರೆ. ಬಾಕಿ ಎರಡು ಮತ್ತು ಮೂರನೆಯವರು ಮೆಜಾರಿಟಿಯಿದ್ದಾರೆ ಮತ್ತು ಬಾಪ್‌ದಾದಾರವರಿಗೆ ಒಂದುಮಾತಿನ ಮೇಲೆ ವಿಶೇಷ ಖುಷಿಯಿದೆ- ಎಲ್ಲರೂ ಈ ತಪಸ್ಯಾ ವರ್ಷಕ್ಕೆ ಮಹತ್ವಿಕೆ ನೀಡಿದ್ದೀರಿ ಆದ್ದರಿಂದ ಪರೀಕ್ಷೆಗಳೂ ಬಂದಿವೆ ಆದರೆ ಮೆಜಾರಿಟಿ ಬಹಳ ಚೆನ್ನಾಗಿ ತೇರ್ಗಡೆಯಾಗಿದ್ದೀರಿ. ತಪಸ್ಸು ಮಾಡಬೇಕೆಂದು ಯಾವ ಸಂಕಲ್ಪವನ್ನಿಟ್ಟುಕೊಂಡಿದ್ದೀರೋ ಈ ಸಂಕಲ್ಪದ ಸಾಮರ್ಥ್ಯವು ಸಹಯೋಗ ನೀಡಿದೆ ಆದ್ದರಿಂದ ಫಲಿತಾಂಶವು ಚೆನ್ನಾಗಿದೆ. ಅದಕ್ಕಾಗಿ ಶುಭಾಷಯಗಳು, ಬಾಕಿ ಈಗ ಬಹುಮಾನವನ್ನಂತೂ ದಾದಿಯರು ಕೊಡುವರು. ತಂದೆಯು ಎಲ್ಲರಿಗೆ ಬಹಳ ಒಳ್ಳೆಯವರು, ಬಹಳ ಒಳ್ಳೆಯವರು ಎಂಬ ಬಹುಮಾನವನ್ನು ಕೊಟ್ಟುಬಿಟ್ಟೆವು. ಈಗಿನಿಂದ ತಪಸ್ಯಾ ವರ್ಷವು ಮುಗಿದುಹೋಯಿತೆಂದು ಆಲಸ್ಯದಲ್ಲಿ ಬರುವುದಲ್ಲ. ಇನ್ನೂ ದೊಡ್ಡ ಬಹುಮಾನವನ್ನು ತೆಗೆದುಕೊಳ್ಳಬೇಕಾಗಿದೆ. ತಿಳಿಸಿದೆವಲ್ಲವೆ- ಕರ್ಮ ಮತ್ತು ಯೋಗದ ಬ್ಯಾಲೆನ್ಸ್‌ನ ಬಹುಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಸೇವೆ ಮತ್ತು ತಪಸ್ಸಿನ ಬ್ಯಾಲೆನ್ಸ್‌ನ ಬ್ಲೆಸ್ಸಿಂಗ್ ಅನುಭವ ಮಾಡಬೇಕಾಗಿದೆ ಮತ್ತು ನಿಮಿತ್ತಮಾತ್ರ ಬಹುಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಸತ್ಯ ಬಹುಮಾನವೆಂದರೆ ತಂದೆ ಮತ್ತು ಪರಿವಾರದ ಆಶೀರ್ವಾದಗಳ ಬಹುಮಾನವಾಗಿದೆ. ಅದಂತೂ ಎಲ್ಲರಿಗೂ ಸಿಗುತ್ತಿದೆ.

ಒಳ್ಳೆಯದು- ಇಂದು ಸೂಕ್ಷ್ಮ ವತನವನ್ನಾಗಿ ಮಾಡಿಬಿಟ್ಟಿದ್ದೀರಿ. ಒಳ್ಳೆಯದು. ವಾಯುಮಂಡಲವು ಬಹಳ ಚೆನ್ನಾಗಿದೆ, ಆ ಜ್ಯೋತಿಯ ದೇಶದ ಮುಂದೆ ಈ ಸಜ್ಜುಗೊಳಿಸಿರುವ ಸೂಕ್ಷ ವತನವು ಮಾದರಿಯೆನಿಸುತ್ತದೆಯಲ್ಲವೆ. ಆದರೂ ಮಕ್ಕಳ ಉಮ್ಮಂಗ-ಉತ್ಸಾಹ ಮತ್ತು ವಾಯುಮಂಡಲವು ವೃತ್ತಿಯನ್ನು ಅವಶ್ಯವಾಗಿ ಸೆಳೆಯುತ್ತದೆ. ಎಲ್ಲರೂ ಸೂಕ್ಷ್ಮ ವತನದಲ್ಲಿ ಕುಳಿತಿದ್ದೀರಾ? ಸಾಕಾರ ಶರೀರದಲ್ಲಿರುತ್ತಾ ಮನಸ್ಸಿನಿಂದ ಸೂಕ್ಷ್ಮ ವತನವಾಸಿಯಾಗಿ ಮಿಲನವನ್ನಾಚರಿಸಿರಿ. ಬಾಪ್‌ದಾದಾರವರಿಗೆ ಖುಷಿಯೇನೆಂದರೆ ಮಕ್ಕಳಿಗೆ ಸೂಕ್ಷ್ಮ ವತನವು ಬಹಳ ಪ್ರಿಯವೆನಿಸುತ್ತದೆ ಆದ್ದರಿಂದಲೇ ತಯಾರು ಮಾಡಿದ್ದೀರಲ್ಲವೆ. ಬಹಳ ಪರಿಶ್ರಮಪಟ್ಟು ಮಾಡಿದ್ದೀರಿ ಮತ್ತು ಪ್ರೀತಿಯಿಂದ ಮಾಡಿದ್ದೀರಿ. ಶ್ರೇಷ್ಠ ಉಮ್ಮಂಗ-ಉತ್ಸಾಹದ ಸಂಕಲ್ಪದಿಂದ ಮಾಡಿದ್ದೀರಿ ಆದ್ದರಿಂದ ಬಾಪ್‌ದಾದಾ ಸಂಕಲ್ಪ ಮಾಡುವವರಿಗೆ ಸಾಕಾರದಲ್ಲಿ ತರುವವರಿಗೆ. ಎಲ್ಲರಿಗೂ ಶುಭಾಶಯಗಳನ್ನು ಕೊಡುತ್ತೇವೆ. ಇದೂ ಸಹ ಬೇಹದ್ದಿನ ಆಟದಲ್ಲಿ ಆಟವಾಗಿದೆ ಮತ್ತಾವ ಆಟವನ್ನು ಆಡುವಿರಿ? ಇದೇ ಆಟವಾಡುತ್ತೀರಲ್ಲವೆ. ಕೆಲವೊಮ್ಮೆ ಸ್ವರ್ಗವನ್ನು ತಯಾರು ಮಾಡುತ್ತೀರಿ. ಕೆಲವೊಮ್ಮೆ ಸೂಕ್ಷ್ಮ ವತನವನ್ನು ತಯಾರು ಮಾಡುತ್ತೀರಿ. ಇದು ಬುದ್ಧಿಯನ್ನು ಸೆಳೆಯುತ್ತದೆ. ಒಳ್ಳೆಯದು - ನಾಲ್ಕಾರು ಕಡೆಯ ಸರ್ವಜ್ಯೋತಿರ್ಬಿಂದು ಸಾಲಿಗ್ರಾಮಗಳಿಗೆ ತಂದೆಯ ದಿವ್ಯಜನ್ಮ ಹಾಗೂ ಮಕ್ಕಳ ದಿವ್ಯಜನ್ಮದ ಶುಭಾಷಯಗಳು.

**ಇಂತಹ ಸರ್ವಶ್ರೇಷ್ಠ, ಸದಾ ಸಿದ್ಧಿಸ್ವರೂಪ ಆತ್ಮರಿಗೆ, ಸದಾ ದಿವ್ಯ ಹೊಳೆಯುತ್ತಿರುವ ನಕ್ಷತ್ರಗಳಿಗೆ, ಸದಾ ಅಭಿಮಾನ ಮತ್ತು ಅಪಮಾನದಿಂದ ಅತೀತವಾಗಿರುವ ಸ್ವಮಾನದಲ್ಲಿ ಸ್ಥಿತರಾಗಿರುವ ಆತ್ಮರಿಗೆ, ಸದಾ ಶ್ರೇಷ್ಠಪುರುಷಾರ್ಥ ಮತ್ತು ಶ್ರೇಷ್ಠ ಸೇವೆಯ ಉಮ್ಮಂಗ-ಉತ್ಸಾಹದ ಶ್ರೇಷ್ಠ ಆಸೆಗಳ ದೀಪವನ್ನು ಬೆಳಗಿಸುವಂತಹ ಆತ್ಮರಿಗೆ, ಸದಾ ತಮ್ಮ ಹೃದಯದಲ್ಲಿ ವಿಜಯದ ಧ್ವಜವನ್ನು**

**ಹಾರಿಸುವಂತಹ ಶಿವಮಯಿ ಶಕ್ತಿಸೇನೆಗೆ, ಸದಾ ಪುರುಷಾರ್ಥದಲ್ಲಿ ಸಹಜ ಸಫಲತೆಯನ್ನು ಅನುಭವ ಮಾಡುವಂತಹ ಸಫಲತಾ ಸ್ವರೂಪ ಮಕ್ಕಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 02-03-1992

***ಮಹಾಶಿವರಾತ್ರಿ ಆಚರಿಸುವುದು ಅರ್ಥಾಥ್ ಪ್ರತಿಜ್ಞೆ ಮಾಡುವುದು, ವ್ರತ ತೆಗೆದುಕೊಳ್ಳುವುದು ಮತ್ತು ಬಲಿಯಾಗುವುದು***

ಮಹಾಶಿವರಾತ್ರಿಯ ವಿಶೇಷತೆಗಳೇನು? 1.ತಂದೆಯ ಮುಂದೆ ಪ್ರತಿಜ್ಞೆ ಮಾಡುತ್ತೀರಿ. 2. ತಂದೆಯ ಮೇಲಿನ ಪ್ರೀತಿಯಿಂದ ವ್ರತವನ್ನು ಇಡುತ್ತೀರಿ. ಏಕೆಂದರೆ ಪ್ರೀತಿ ಮತ್ತು ಖುಷಿಯಲ್ಲಿ ಎಲ್ಲವನ್ನು ಮರೆತುಬಿಡುತ್ತಿರಿ ಆದರಿಂದ ವ್ರತವನ್ನಿಡುತ್ತೀರಿ. ಖುಷಿಯ ಔಷಧಿಯನ್ನು ಸೇವಿಸುತ್ತೀರಿ. ಆದ್ದರಿಂದ ಖುಷಿಯ ಚಿಹ್ನೆಯೂ ಆಗಿದೆ ಮತ್ತು ವ್ರತವನ್ನಿಡುವುದು ಎಂದರೆ ಪ್ರೀತಿಯಲ್ಲಿ ತ್ಯಾಗದ ಭಾವನೆಯಾಗಿದೆ. ಏನನ್ನಾದರೂ ಬಿಡುವುದು ಎಂದರೆ ತ್ಯಾಗಭಾವನೆಯ ಚಿಹ್ನೆಯಾಗಿದೆ. 3. ಶಿವರಾತ್ರಿ ಅರ್ತಾಥ್ ಬಲಿಯಾಗುವುದು ಸ್ಮೃತಿಚಿಹ್ನೆಯಾಗಿ ಸ್ಥೂಲ ಬಲಿಯನ್ನು ಕೊಡುತ್ತಾರೆ ಆದರೆ  ಮನಸ್ಸು, ಬುದ್ಧಿಯಿಂದ ಮತ್ತು ಸಂಬಂಧದಿಂದ ಸಮರ್ಪಿತರಾಗುವುದೇ ವಾಸ್ತವಿಕ ಬಲಿಯಾಗುವುದಾಗಿದೆ. ಅಂದಾಗ ಈ ಮೂರು ವಿಶೇಷತೆಗಳು ಪ್ರತ್ಯಕ್ಷ ಜೀವನದಲ್ಲಿ ತರುವುದನ್ನೇ ಶಿವರಾತ್ರಿಯನ್ನು ಆಚರಿಸಿಕೊಳ್ಳುವುದಾಗಿದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಮುಂದೆ  ಪ್ರತಿಜ್ಞೆ ಮಾಡಿ, ತಂದೆಯ ಮೇಲಿರುವ ಪ್ರೀತಿಯಿಂದ ವ್ರತವನ್ನಿಟ್ಟು ಖುಷಿಯ ಭೋಜನವನ್ನು ಸ್ವೀಕರಿಸಿ, ಮನಸ್ಸು, ಬುದ್ಧಿ ಸಂಬಂಧಗಳಿಂದ ಸಮರ್ಪಣೆಯಾಗಿ ಸತ್ಯವಾದ ಶಿವರಾತ್ರಿಯನ್ನು ಆಚರಿಸಿಕೊಂಡಿದ್ದೇನೆ.

2. ನಾನು ಮಹಾಶಿವರಾತ್ರಿಯ ಪ್ರತ್ಯಕ್ಷ ಸ್ವರೂಪದ  ಪ್ರತಿಜ್ಞೆಯನ್ನು ಮಾಡಿ ಶ್ರೇಷ್ಠ ಸಂಕಲ್ಪವೆಂಬ ಉನ್ನತೋನ್ನತವಾದ ಬಹುಮಾನವನ್ನು ಪಡೆದಿದ್ದೇನೆ. (ಪ್ರತಿಜ್ಞೆ ಅರ್ಥಾತ್ ಹೇಳುವುದು ಮತ್ತು ಮಾಡುವುದು ಸಮಾನವಾಗಿ ಇಟ್ಟುಕೊಳ್ಳುವುದು)

3. ನಾನು ಧೈರ್ಯ ಮತ್ತು ಗಮನದಿಂದ ತಂದೆಯ ಸಹಾಯವು ತಪ್ಪದೇ ಲಭಿಸುತ್ತದೆ ಎಂಬ ಶ್ರೇಷ್ಠ ಸಂಕಲ್ಪದಿಂದ ಪ್ರತಿಜ್ಞೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

4. ನಾನು ತಂದೆಯನ್ನು ಜೊತೆಯಾಗಿಟ್ಟುಕೊಂಡು ವಿಜಯವನ್ನು ಪಡೆದು ವಿಜಯದ ಖುಷಿ ಮತ್ತು ನಶೆಯಿಂದ ಶಕ್ತಿಶಾಲಿಯಾಗಿ ಇದ್ದೇನೆ.

5. ನಾನು ಬಲಹೀನತೆಗಳನ್ನೆಲ್ಲವನ್ನು ಬಲಿ ಮಾಡಿ ಮಹಾಬಲಶಾಲಿಯಾಗಿದ್ದೇನೆ. (ಎಲ್ಲದಕ್ಕಿಂತ ದೊಡ್ಡ ಬಲಹೀನತೆ ದೇಹಾಭಿಮಾನ)

6. ನಾನು ದೇಹಾಭಿಮಾನವನ್ನು ವಂಶಸಹಿತವಾಗಿ ಸಮರ್ಪಣೆ ಮಾಡಿ, ಶ್ರೇಷ್ಠ ವೃತ್ತಿಯಿಂದ ಬಲಹೀನ ವೃತ್ತಿಯನ್ನು ತೊಲಗಿಸಿ, ವೃತ್ತಿ, ದೃಷ್ಟಿ, ಕೃತಿಯನ್ನು ಶ್ರೇಷ್ಠವಾಗಿ ಇಟ್ಟುಕೊಂಡಿದ್ದೇನೆ.

7. ನಾನು ಶ್ರೇಷ್ಠ ವೃತ್ತಿಯ ವ್ರತವನ್ನು ತೆಗೆದುಕೊಂಡು ಶಿವರಾತ್ರಿಯನ್ನು ಆಚರಿಸಿಕೊಂಡಿದ್ದೇನೆ.

8. ನನ್ನ ಪ್ರತಿ ಸಂಕಲ್ಪ, ಮಾತು ಸಿದ್ಧಿಸುವ ಉನ್ನತೋನ್ನತವಾದ ಸಿದ್ದಿಸ್ವರೂಪ. (ಇದನ್ನೇ ಸಿದ್ಧಿಪುರುಷರು ಎಂದು ಕರೆಯುತ್ತಾರೆ)

9. ನಾನು ಸಂಕಲ್ಪ ಎಂಬ ಬೀಜವನ್ನು ದೃಢ ಧಾರಣೆ ಎಂಬ ಭೂಮಿಯಲ್ಲಿ ಪದೇ-ಪದೇ ಗಮನವೆಂಬ ಹಾರೈಕೆ ಮಾಡಿ ಪ್ರತ್ಯಕ್ಷ ರೂಪದಲ್ಲಿ ತಂದಿದ್ದೇನೆ.

10. ನಾನು ಅಭಿಮಾನ ಮತ್ತು ಅವಮಾನ ಈ ಎರಡನ್ನು ಸಮಾಪ್ತಿ ಮಾಡಿ ನಿರ್ಮಾನವಾಗಿ ಇರುತ್ತಾ ನಿರ್ಮಾಣದ ಕಾರ್ಯದಲ್ಲಿ ತತ್ಪರವಾಗಿ ಇದ್ದೇನೆ. (ಇದೇ ಶಿವರಾತ್ರಿಯನ್ನು ಆಚರಿಸಿಕೊಳ್ಳುವುದು.)

11. ನಾನು ಮನಸ್ಸಿನಲ್ಲಿ ಸಂಕಲ್ಪ ಎಂಬ ಹಗ್ಗದಿಂದ ಸದಾ ವಿಜಯದ ಧ್ವಜವನ್ನು ಹಾರಿಸಿದ್ದೇನೆ.

12. ನಾನು ಕರ್ಮ ಮತ್ತು ಯೋಗದ ಸಮಾನತೆಯನ್ನು ಇಟ್ಟು ತಂದೆ ಮತ್ತು ಪರಿವಾರದ ಆಶೀರ್ವಾದಗಳು ಎಂಬ ಸತ್ಯವಾದ ಬಹುಮಾನವನ್ನು ಪಡೆದಿದ್ದೇನೆ.